# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

**ಸಿ.ಎ. ನಿವೇಶನ ಖಾತೆ ನಂ.** 31-511-371, **ವಾರ್ಡ್ ನಂ.** 20, **ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ,**
**ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ**-562110
**ದೂ. : 080-29566001, 080-27682035** ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

**ಸಂ. ಬಿಐಎಎಪಿಎ/ಟಿಪಿ/ಸಿಸಿ/428/2025-26** 3851 **ದಿನಾಂಕ:** 17 JAN 2026

## "ಪ್ರಾರಂಭಿಕ ಪ್ರಮಾಣ ಪತ್ರ"

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)**
**(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳ 1965 ರ ನಿಯಮ 30 ನಮೂನೆ 3 ರನ್ವಯ)**

**ವಿಷಯ:** ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಅಕ್ಲೇನಹಳ್ಳಿ-ಮಲ್ಲೇನಹಳ್ಳಿ ಗ್ರಾಮದ ಸ.ನಂ. 2 ರ ಪೈಕಿ 0ಎ-1.12ಗು, 3/2 ರ ಪೈಕಿ 0ಎ-01ಗು, 6 ರ ಪೈಕಿ 3ಎ-21.08ಗು, 7 ರ ಪೈಕಿ 4ಎ-21ಗು, 8/1 ರಲ್ಲಿ 2ಎ-20ಗು, 8/2 ರ ಪೈಕಿ 1ಎ-08ಗು, 8/3 ರಲ್ಲಿ 0ಎ-35ಗು, 9/1 ರಲ್ಲಿ 1ಎ-36ಗು, 9/2 ರಲ್ಲಿ 2ಎ-06ಗು, 9/3 ರಲ್ಲಿ 3ಎ-16ಗು, 10 ರಲ್ಲಿ 3ಎ-12ಗು, 11 ರಲ್ಲಿ 3ಎ-19ಗು, 12/1 ರಲ್ಲಿ 1ಎ-36ಗು, 12/2 ರಲ್ಲಿ 2ಎ-13ಗು, 12/3 ರಲ್ಲಿ 1ಎ-23ಗು, 13/1 ರಲ್ಲಿ 3ಎ-36ಗು, 13/2 ರಲ್ಲಿ 0ಎ-03ಗು, 14/1ಬಿ ರಲ್ಲಿ 2ಎ-03ಗು, 15/1 ರಲ್ಲಿ 3ಎ-09ಗು, 16 ರಲ್ಲಿ 1ಎ-14ಗು, 17 ರಲ್ಲಿ 2ಎ-11ಗು, 19 ರಲ್ಲಿ 0ಎ-37ಗು, 20 ರ ಪೈಕಿ 2ಎ-34.04ಗು, 25 ರ ಪೈಕಿ 0ಎ-04ಗು, 37/4 ರ ಪೈಕಿ, 1ಎ-35.08ಗು ಮತ್ತು 37/7 ರ ಪೈಕಿ 0ಎ-03ಗು ಒಟ್ಟು 51ಎ-19ಗು ಅಥವಾ 208309.03 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಅನುಮೋದಿತ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಖಾತಾ ಸಂಖ್ಯೆ: 103 (ಸ್ವತ್ತಿನ ಸಂಖ್ಯೆ. 150300201900320102) ರಲ್ಲಿ ವಸತಿ ಉಪಯೋಗದ ಟವರ್ ಸಂಖ್ಯೆ - 01, 02, 03, 04, 05ಎ, 05ಬಿ & 6 (2B + G + 14UF) ಗಳನ್ನು ಒಳಗೊಂಡಂತೆ ಒಟ್ಟಾರೆ 548 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸಲು ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ.

**ಉಲ್ಲೇಖ:**
1. ಈ ಪ್ರಾಧಿಕಾರದಿಂದ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ: ಬಿಐಎಎಪಿಎ/ಟಿಪಿ/ಎಲ್ಎಒ/ಡಿಪಿ/56/2022-23/375, ದಿನಾಂಕ: 20/05/2023.
2. ಅರ್ಜಿದಾರರ ಮನವಿ ಅರ್ಜಿ ದಿನಾಂಕ: 04/11/2025.
3. ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಪೂರ್ವ ಸಮ್ಮತಿಗಾಗಿ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರಿಗೆ ಕಡತ ಸಲ್ಲಿಸಿದ ದಿನಾಂಕ: 24/12/2025.
4. ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು ಸಮ್ಮತಿ ನೀಡಿದ ದಿನಾಂಕ: 31/12/2025.
5. ಈ ಕಛೇರಿ ಸಮ ಸಂಖ್ಯೆಯ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 02/01/2026.
6. ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ 0015433 ರ ದಿನಾಂಕ: 12/01/2026 ರಂತೆ ರೂ. 78,53,630/- (ಎಪ್ಪತ್ತೆಂಟು ಲಕ್ಷದ ಐವತ್ಮೂರು ಸಾವಿರದ ಆರುನೂರ ಮೂವತ್ತು ರೂಪಾಯಿಗಳು ಮಾತ್ರ) ರಂತೆ ಪಾವತಿಸಿರುತ್ತಾರೆ.

******************

ಮೆ॥ ಬಿರ್ಲಾ ಅರ್ನಾ ಎಲ್‌ಎಲ್‌ಪಿ (ನೋಂ) (ಮೆ॥ ಎಂ.ಎಸ್.ರಾಮಯ್ಯ ರಿಯಾಲ್ಟಿ ಎಲ್‌ಎಲ್‌ಪಿ ರ ಪರವಾಗಿ ನೋಂದಾಯಿತ ಜಿಪಿಎದಾದಾರರು ಹಾಗೂ ಜಂಟಿ ಅಭಿವೃದ್ಧಿದಾರರು) ರವರು ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಅಕ್ಲೇನಹಳ್ಳಿ-ಮಲ್ಲೇನಹಳ್ಳಿ ಗ್ರಾಮದ ಸ.ನಂ. 2 ರ ಪೈಕಿ 0ಎ-1.12ಗು, 3/2 ರ ಪೈಕಿ 0ಎ-01ಗು, 6 ರ ಪೈಕಿ 3ಎ-21.08ಗು, 7 ರ ಪೈಕಿ 4ಎ-21ಗು, 8/1 ರಲ್ಲಿ 2ಎ-20ಗು, 8/2 ರ ಪೈಕಿ 1ಎ-08ಗು, 8/3 ರಲ್ಲಿ 0ಎ-35ಗು, 9/1 ರಲ್ಲಿ 1ಎ-36ಗು, 9/2 ರಲ್ಲಿ 2ಎ-06ಗು, 9/3 ರಲ್ಲಿ 3ಎ-16ಗು, 10 ರಲ್ಲಿ 3ಎ-12ಗು, 11 ರಲ್ಲಿ 3ಎ-19ಗು, 12/1 ರಲ್ಲಿ 1ಎ-36ಗು, 12/2 ರಲ್ಲಿ 2ಎ-13ಗು, 12/3 ರಲ್ಲಿ 1ಎ-23ಗು, 13/1 ರಲ್ಲಿ 3ಎ-36ಗು, 13/2 ರಲ್ಲಿ 0ಎ-03ಗು, 14/1ಬಿ ರಲ್ಲಿ 2ಎ-03ಗು, 15/1 ರಲ್ಲಿ 3ಎ-09ಗು, 16 ರಲ್ಲಿ 1ಎ-14ಗು, 17 ರಲ್ಲಿ 2ಎ-11ಗು, 19 ರಲ್ಲಿ 0ಎ-37ಗು, 20 ರ ಪೈಕಿ 2ಎ-34.04ಗು, 25 ರ ಪೈಕಿ 0ಎ-04ಗು, 37/4 ರ ಪೈಕಿ, 1ಎ-35.08ಗು ಮತ್ತು 37/7 ರ ಪೈಕಿ 0ಎ-03ಗು ಒಟ್ಟು 51ಎ-

19ಗು ಅಥವಾ 208309.03 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಉಲ್ಲೇಖ (1) ರಂತೆ ಅನುಮೋದಿತ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಖಾತಾ ಸಂಖ್ಯೆ: 103 (ಸ್ವತ್ತಿನ ಸಂಖ್ಯೆ. 150300201900320102) ರಲ್ಲಿ ವಸತಿ ಉಪಯೋಗದ ಟವರ್ ಸಂಖ್ಯೆ – 01, 02, 03, 04, 05ಎ, 05ಬಿ & 6 (2B + G + 14UF) ಗಳನ್ನು ಒಳಗೊಂಡಂತೆ ಒಟ್ಟಾರೆ 548 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸಲು ನಿರ್ಮಿಸುವ ಸಂಬಂಧ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿ ಉಲ್ಲೇಖ (2) ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ : ಯುಡಿಡಿ234ಬಿಎಂಆರ್2023, ದಿನಾಂಕ: 20/11/2023 ರಂತೆ ಅನುಮೋದನೆಯಾದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿಯಮಗಳು 2020 ರಲ್ಲಿನ ನಿಯಮ 18 (5) ರನ್ವಯ ಮತ್ತು ದಿನಾಂಕ: 27/12/2023 & 03/02/2024 ರಂದು ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಅಧಿಕೃತ ಜ್ಞಾಪನಾ ಪತ್ರದಲ್ಲಿ ಸೂಚಿಸಿರುವಂತೆ ಸದರಿ ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಂಬಂಧ ಉಲ್ಲೇಖ (3) ರಂತೆ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರನ್ನು ಪೂರ್ವ ಸಮ್ಮತಿಯನ್ನು ಕೋರಲಾಗಿದ್ದು, ಉಲ್ಲೇಖ (4) ರಂತೆ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು ಹಲವು ಷರತ್ತುಗಳಿಗೆ ಒಳಪಟ್ಟು ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಸಮ್ಮತಿ ನೀಡಿರುತ್ತಾರೆ.

ಉಲ್ಲೇಖ (5) ರಲ್ಲಿನ ಈ ಕಛೇರಿ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಲು ಹಾಗೂ ವಲಯ ನಿಯಮಾವಳಿಗೆ ಅನುಗುಣವಾಗಿ ಕಟ್ಟಡ ನಕ್ಷೆಯನ್ನು ಅಳತೆಗೆ ತಯಾರಿಸಿ, ನಡುಜಾಗೆಗಳನ್ನು ನಿಯಮಾನುಸಾರ ಕಾಯ್ದಿರಿಸಿ, ಅರ್ಜಿದಾರರ ಹಾಗೂ ಅಭಿಯಂತರರ ಸಹಿಯೊಂದಿಗೆ ಕಟ್ಟಡ ನಕ್ಷೆಯ ಮೂಲ ಪ್ರತಿ ಹಾಗೂ ನೀಲಿ ನಕ್ಷೆಯ ಪ್ರತಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

ಉಲ್ಲೇಖ (6) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿ, ಉದ್ದೇಶಿತ ಕಟ್ಟಡಗಳ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಗಿನ ನಿಬಂಧನೆಗಳೊಂದಿಗೆ ನೀಡಲಾಗಿದೆ.

## ನಿಬಂಧನೆಗಳು

1. ಈ ಪ್ರಾಧಿಕಾರದ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಪತ್ರ ಸಂಖ್ಯೆ: ಬಿಐಎಪಿಎ/ಟಿಪಿ/ಎಲ್ಎಒ/ಡಿಪಿ/56/2022-23/375, ದಿನಾಂಕ: 20/05/2023 ರ ಆದೇಶದಲ್ಲಿನ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
2. ಯೋಜಿಸಿರುವ ಕಟ್ಟಡವನ್ನು ವಸತಿ ಉದ್ದೇಶಕ್ಕಾಗಿಯೇ ಉಪಯೋಗಿಸಬೇಕು.
3. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ **ದಿನಾಂಕ: 17/01/2026** ರಿಂದ **16/01/2028** ರವರೆಗೆ ಮಾತ್ರ ನೀಡಲಾಗಿರುತ್ತದೆ.
4. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಅಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು ಅಣ್ಣೇಶ್ವರ ಗ್ರಾಮ ಪಂಚಾಯ್ತಿರವರಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.
5. ವಸತಿ ಉಪಯೋಗದ ಕಟ್ಟಡವನ್ನು ನಿರ್ಮಿಸಲು ಪರವಾನಿಗೆಯನ್ನು ಅಣ್ಣೇಶ್ವರ ಗ್ರಾಮ ಪಂಚಾಯ್ತಿಯಿಂದ ಪಡೆಯಬೇಕು.
6. ವಸತಿ ಉಪಯೋಗದ ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ನಿರ್ಮಿಸಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.
7. ವಸತಿ ಉಪಯೋಗದ ಕಟ್ಟಡ ನಿರ್ಮಿಸಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ನಿರ್ಮಿಸತಕ್ಕದ್ದು.

8. ವಸತಿ ಉಪಯೋಗದ ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.
9. ವಸತಿ ಉಪಯೋಗದ ಕಟ್ಟಡದ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
10. ಪ್ರಸ್ತಾವನೆ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರ ಪತ್ರ ಸಂಖ್ಯೆ: ಬಿಐಎಎಲ್/ ಸೌತ್/ಬಿ/081222/689076 ದಿನಾಂಕ: 30/08/2022 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
11. ಪ್ರಸ್ತಾವನೆ ಸಂಬಂಧ ಅಗ್ನಿ ಶಾಮಕ ಇಲಾಖೆ ರವರ ಕಛೇರಿ ಪತ್ರ ಸಂಖ್ಯೆ: KSFES/GBC(1)404 Docket no: KSFES/NOC/404/2025 ದಿನಾಂಕ: 08/10/2025 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
12. ಪ್ರಸ್ತಾವನೆ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ ರವರ ಪತ್ರ ಸಂಖ್ಯೆ: ಸಿಟಿಇ–336346, ಪಿಸಿಬಿಐಡಿ : 136235, ದಿನಾಂಕ: 21/02/2023 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
13. ಪ್ರಸ್ತಾವನೆ ಸಂಬಂಧ State Level Environment Impact Assessment Authority-Karanataka ರವರ ಪತ್ರ ಸಂಖ್ಯೆ : SEIAA145CON2022, ದಿನಾಂಕ: 11/05/2023 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು. ಹಾಗೂ ಅಗತ್ಯವಿದ್ದಲ್ಲಿ ಪರಿಷ್ಕೃತ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
14. ಪ್ರಸ್ತಾವನೆ ಸಂಬಂಧ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ ರವರ ಪತ್ರ ಸಂಖ್ಯೆ : DGM(CM)BGTD/ NOC for high rise /2024-25/136, Dated @ Bangalore the 05/07/2024 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
15. ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ ರವರ ಪತ್ರ ಸಂಖ್ಯೆ: CEBRAZ/SEO/AEE-2/2023-24/785-87 ದಿನಾಂಕ: 11/05/2023 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
16. ಪ್ರಸ್ತಾವನೆ ಸಂಬಂಧ ಸ್ಥಳದಲ್ಲಿ ಯಾವುದೇ ಕಾಮಗಾರಿಗಳನ್ನು ಪ್ರಾರಂಭ ಮಾಡುವ ಪೂರ್ವದಲ್ಲಿ ಏರ್‌ಪೋರ್ಸ್, ಯಲಹಂಕ ರವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
17. ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ–2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.
18. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.
19. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.

20. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡದ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.
21. ಪ್ರಶ್ನಿತ ನಿವೇಶನದಲ್ಲಿ ಉದ್ದೇಶಿಸಿರುವ ವಸತಿ ಉಪಯೋಗದ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.
22. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.
23. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷ ಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.
24. ಅಂತರಾಷ್ಟ್ರೀಯ ವಾಯು ನೆಲೆಯ ಪರಿಸರದಲ್ಲಿ ಬರುವುದರಿಂದ ಶಬ್ದಮಾಲಿನ್ಯ ಸಹಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.
25. ವಸತಿ ಉಪಯೋಗದ ಕಟ್ಟಡ ಅನುಮೋದನೆ ಸಂಬಂಧ ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
26. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಪೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ.

17/01/2026

**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

***ಇವರಿಗೆ:***

**ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು,**
ಅಗ್ಗೇಶ್ವರ ಗ್ರಾಮ ಪಂಚಾಯ್ತಿ,
ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

} ಕಟ್ಟಡ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

**ಪ್ರತಿಯನ್ನು:**

1. ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2 ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3 ನೇ ಕ್ರಾಸ್ ಮಿಷನ್ ರಸ್ತೆ, ಬೆಂಗಳೂರು-560027 ಇವರ ಮಾಹಿತಿಗಾಗಿ ಕಳುಹಿಸಿದೆ.
2. Command ATC Officer, HQ Training Command, IAF, JC Nagar Post, Bengaluru - 560006 ರವರ ಮಾಹಿತಿಗಾಗಿ.
3. ಮೆ॥ ಬಿರ್ಲಾ ಅರ್ನಾ ಎಲ್‌ಎಲ್‌ಪಿ (ನೋಂ) (ಮೆ॥ ಎಂ.ಎಸ್.ರಾಮಯ್ಯ ರಿಯಾಲ್ಟಿ ಎಲ್‌ಎಲ್‌ಪಿ ರ ಪರವಾಗಿ ನೋಂದಾಯಿತ ಜಿಪಿಎದಾದಾರರು ಹಾಗೂ ಜಂಟಿ ಅಭಿವೃದ್ಧಿದಾರರು), ಜಿ-2, ನಂ. 10/1, ನೆಲಮಹಡಿ, ಪ್ರೈಡ್ ಎಲೈಟ್, ಮುನಿಸಿಪಲ್ ನಂ. 10, ಮ್ಯೂಸಿಯಮ್ ರಸ್ತೆ, ರಿಚ್‌ಮಂಡ್ ಟೌನ್, ಬೆಂಗಳೂರು-560025 ರವರ ಮಾಹಿತಿಗಾಗಿ.
4. ಕಛೇರಿ ಪ್ರತಿ.